ಒಂದಾಣೆ ಮಾಲೆ 305

ಎಲ್ಲಿ ಪ್ರೇಮವೋ ಅಲ್ಲಿ ದೇವರು

(ಏಕಾಂಕ ನಾಟಕ)

ಲಿಯೊ ಟೊಲ್‌ಸ್ಟೊಯಿಯವರು ಬರೆದ
"WHERE LOVE IS THERE GOD IS"
ಎಂಬ ಕಥೆಯನ್ನು ನಾಟಕರೂಪದಲ್ಲಿ ಬರೆದುದು.

*

ರಚಯಿತ:
ಯಂ. ಕೆ. ಬೇಲಕರ, ಮಧುರಕಾನನ.

*

1961

ಬೆಲೆ: ೧ ಆಣೆ.

ಒಂದಾಣೆ ಮಾಲೆ — ಮಂಗಳೂರು.

(13ನೇ ಪುಟದಿಂದ ಮುಂದುವರಿದುದು)

ನಡೆದ ಸಪ್ಪಳ ಕೇಳಿ) ಇದೇನು? ಯಾರೋ ಬರುತ್ತಿರುವಂತಿದೆ. ಕಾಲ ಸಪ್ಪಳ ಕೇಳಿಸುತ್ತಿದೆ. (ಎದ್ದು ಸುತ್ತಲೂ ನೋಡಿ) ಅದೋ, ಅಲ್ಲಿ ಕತ್ತಲೆಯ ಮೂಲೆಯಲ್ಲಿ ಯಾರೋ ನಿಂತಂತೆ ತೋರುತ್ತಿದೆ. ಯಾರೆಂದು ಸ್ಪಷ್ಟವಾಗುತ್ತಿಲ್ಲ. ಸಮೀಪಕ್ಕೆ ಹೋಗಿ ನೋಡುವೆನು.

ಸ್ಟೆಪಾನಿಚ್: (ಕತ್ತಲೆಯಲ್ಲಿ ಅಸ್ಪಷ್ಟವಾಗಿ ತೋರಿ) ಮಾರ್ಟಿನ್! ಮಾರ್ಟಿನ್! ನಿನಗೆ ನನ್ನ ಪರಿಚಯವಿಲ್ಲವೇ?

ಮಾರ್ಟಿನ್: ಯಾರದು?

ಸ್ಟೆಪಾನಿಚ್: (ಬೆಳಕಿನಲ್ಲಿ ಕಾಣಿಸಿಕೊಂಡು) ನಾನು! (ಮುಗುಳ್ನಕ್ಕು ಮಾಯವಾಗುವನು.)

ಹೆಂಗಸು: (ಮಗುವನ್ನೆತ್ತಿಕೊಂಡು ಕಾಣಿಸಿಕೊಂಡು) ನಾನು! (ಕ್ಷಣದಲ್ಲಿ ಮಾಯವಾಗುವಳು.)

ಮುದುಕಿ–ಹುಡುಗ: ನಾನು! (ಮುದುಕಿ ಮತ್ತು ಹಣ್ಣು ಕೈಯಲ್ಲಿ ಹಿಡಿದ ಹುಡುಗ ಕಾಣಿಸಿಕೊಂಡು ಮಾಯವಾಗುವರು. ಮಾರ್ಟಿನನು ಸಂತೋಷದಿಂದ ಕುರ್ಚಿಯಲ್ಲಿ ಕುಳಿತು ಕನ್ನಡಕ ಹಾಕಿಕೊಂಡು ಪವಿತ್ರ ಗ್ರಂಥ ತೆರೆದಲ್ಲಿಂದಲೇ ಓದತೊಡಗುವನು.)

ಮಾರ್ಟಿನ್: "ನಾನು ಹಸಿದಿದ್ದೆ—ನೀನು ಅನ್ನವಿತ್ತೆ. ನಾನು ಬಾಯಾರಿದ್ದೆ—ನೀನು ನೀರಡಿಕೆಯಿತ್ತೆ. ನಾನು ಹೊಸಬನಾಗಿದ್ದೆ. ನೀನು ಕರೆದು ಆಶ್ರಯವಿತ್ತೆ."

ಮತ್ತೆ ಮನಸ್ಸಿನಲ್ಲಿಯೇ ಓದಿ ಪುಟದ ಕೆಳಭಾಗವನ್ನು ಮಾತ್ರ ದೊಡ್ಡದಾಗಿ ಓದುವನು). ಇವನ್ನೆಲ್ಲ ನೀನು ನನ್ನ ಸೋದರರಲ್ಲಿ ಯಾರಾದರೊಬ್ಬನ ಬಗ್ಗೆ ಮಾಡಿದರೂ ಅವು ನನಗೇ ಸೇರುವವು."

(ಮತ್ತೆ ತಲೆ ಎತ್ತಿ) ಓ ದೇವರೇ! ನೀನು ದೊಡ್ಡವನು. (ಸ್ವಗತ) ನನ್ನ ಕನಸು ಸತ್ಯವಾಯಿತು. ಸ್ವಾಮಿಯು ನಿಜವಾಗಿಯೂ ನನ್ನಲ್ಲಿಗೆ ಬಂದಿದ್ದಾನೆ. ನಾನವನನ್ನು ಸ್ವಾಗತಿಸಿದ್ದೇನೆ. ನಾನು ಧನ್ಯನು! (ತೆರೆ).

— ಸಂಪೂರ್ಣಂ —

ಎಲ್ಲಿ ಪ್ರೇಮವೋ ಅಲ್ಲಿ ದೇವರು

[ರಷ್ಯದ ಶ್ರೇಷ್ಠ ಸಾಹಿತಿ ಲಿಯೊ ಟಾಲ್‌ಸ್ಟಾಯಿ ಬರೆದ "ವೇರ್ ಲೌ ಈಸ್ ದೇರ್ ಗೋಡ್ ಈಸ್" ಎಂಬ ಕಥೆಯನ್ನು ನಟನೆಗೆ ಯೋಗ್ಯವಾಗುವಂತೆ ನಾಟಕರೂಪದಲ್ಲಿ ಬರೆದುದು.]

ಪಾತ್ರವಿವರ—

೧. **ಮಾರ್ಟಿನ್**–ಸಮಗಾರ; ಮುದಿಪ್ರಾಯ. ೨. **ಮುದುಕ**–ಮಾರ್ಟಿನ್‌ನ ಹುಟ್ಟೂರಿನಿಂದ ಪವಿತ್ರ ಸ್ಥಳಗಳನ್ನು ಸಂದರ್ಶಿಸುತ್ತಾ ಬಂದ ಬಾಲ್ಯಮಿತ್ರ. ೩. **ಸ್ಟೆಪಾನಿಚ್**—ನಿಕೋಲಸನ ಕಾಲದ ಮುದಿ ಸಿಪಾಯಿ. ೪. **ಹೆಂಗಸು**—ಬಡ ಸಿಪಾಯಿಯೊಬ್ಬನ ಹೆಂಡತಿ. ೫. **ಮಗು**—ಬಡ ಸಿಪಾಯಿಯ ಮಗು. ೬. **ಮುದುಕಿ**—ಸೇಬು ಮಾರುವ ಮುದುಕಿ. ೭. **ಹುಡುಗ**—ಬಡ ಹುಡುಗ.

ದೃಶ್ಯ ೧

[ಮಾರ್ಟಿನ್‌ನ ಮನೆ. ಅತನು ಸಮಗಾರ. ಚಪ್ಪಲಿಗಳು ಇರಿಸಲ್ಪಟ್ಟಿವೆ. ಅತನು ಕೆಲಸಕ್ಕೆ ಕುಳಿತುಕೊಳ್ಳುವುದೂ ಅಲ್ಲೇ. ಬಲಗಡೆಯಲ್ಲಿ ಒಂದು ಮೇಜು, ಒಂದು ಕುರ್ಚಿ, ಒಂದು ಬೆಂಚು, ಒಂದು ಒಲೆ (ಸ್ಟೌ)—ಅತನ ಅಡಿಗೆಯ ಸಾಮಾನುಗಳು ಇರಿಸಲ್ಪಟ್ಟಿವೆ. ಮಾರ್ಟಿನನು ಬೂಟ್ಸು ಹೊಲಿಯುತ್ತಿರುವನು.]

ಮಾರ್ಟಿನ್: (ಸ್ವಗತ) ನನ್ನ ದುರದೃಷ್ಟವನ್ನು ಏನೆನ್ನಲಿ? .... ನನ್ನ ಈ ಕೆಲಸದಲ್ಲಿ ನೆರವಾಗುತ್ತಿದ್ದ ನನ್ನ ಮುದ್ದು ಮಗ ಕಾಪಿತನೂ ನನ್ನನ್ನು ಅಗಲಿದನು. ನಾನು ಇನ್ನು ಈ ಜಗತ್ತಿನಲ್ಲಿ ಯಾಕಾಗಿ ಬದುಕ ಬೇಕಾಗಿದೆ? ನಾನು ಹಣ್ಣು ಹಣ್ಣು ಮುದುಕನಾದರೂ ದೇವರು ನನ್ನನ್ನು ಕೊಂಡೊಯ್ಯದೆ, ಪುಟ್ಟ ಮಗನನ್ನು ಕೊಂಡೊಯ್ದು ಕಠಿನಮನಸ್ಕನಾದ ನಲ್ಲ! ಅಂತಹ ನಿಷ್ಕರುಣಿಯಾದ ದೇವರನ್ನು ನಂಬಿದರೇನು, ನಂಬದಿದ್ದ ರೇನು........ಆ ದೇವರು ನನ್ನನ್ನು ಈ ಜಗತ್ತಿನಲ್ಲಿ ಏತಕ್ಕಾಗಿ ಇರಿಸಿ ದುಃಖ ಸಾಗರದಲ್ಲಿ ಕೊರಗಿಸುತ್ತಿರುವನೋ?

(ಎಂದು ಕೊರಗುತ್ತಿರುವಾಗ, ಒಬ್ಬ ಮುದುಕ—ಅಂದರೆ ಮಾರ್ಟಿನನ ಹುಟ್ಟೂರಿನಿಂದ ಬಂದ ಮಿತ್ರ—ಪ್ರವೇಶಿಸುತ್ತಾನೆ.)

ಮುದುಕ: ಮಾರ್ಟಿನ್!.......ಮಾರ್ಟಿನ್ ಅವದೀಚ್!,,,,,,,

ಮಾರ್ಟಿನ್: (ಯೋಚನಾಸಮಾಧಿಯಿಂದೆಚ್ಚತ್ತು, ಅಪರೂಪದಲ್ಲಿ ಬಂದ ಮಿತ್ರನನ್ನು ನೋಡಿ, ಎದ್ದು) ಮಿತ್ರನೇ, ಬಾ, ಕುಳಿತುಕೋ...... ಊರಿನಿಂದಲೇ ಬಂದೆಯಾ?

ಮುದುಕ: ಅಲ್ಲ ಮಾರ್ಟಿನ್. ಈಗ ಎಂಟು ವರುಷಗಳಿಂದ ನಾನು ಪವಿತ್ರ ಸ್ಥಳಗಳನ್ನು ಸಂದರ್ಶಿಸುತ್ತಾ ಯಾತ್ರೆ ಮಾಡುತ್ತಿದ್ದೇನೆ. ಇದೇಕೆ ಮಾರ್ಟಿನ್, ನಿನ್ನ ಮುಖದಲ್ಲಿ ಚಿಂತಾರೇಖೆಗಳೇ ಎದ್ದು ಕಾಣುತ್ತಿವೆಯಲ್ಲ?

ಮಾರ್ಟಿನ್: ಅಯ್ಯೋ, ಅದೊಂದು ಕರುಣಕತೆ. ದೇವರಿಗೆ ನನ್ನ ಮೇಲೆ ಎಳ್ಳನಿತೂ ಕರುಣೆಯಿಲ್ಲ. ನಾನು ಈ ಸ್ವಂತ ಅಂಗಡಿ ಇಡುವ ಮೊದಲೇ ನನ್ನ ಧರ್ಮಪತ್ನಿ ತೀರಿಕೊಂಡಳು. (ಗಂಟಲು ಬಿಗಿದುಬರುತ್ತದೆ) ಅವಳಲ್ಲಿ ಜನಿಸಿದ ಒಂದು ಮಗುವನ್ನಾದರೂ ದೇವರು ನನ್ನ ಪಾಲಿಗೆ ಬಿಡಲಿಲ್ಲ. ಹೆಂಡತಿ ತೀರುವಾಗ ಬಿಟ್ಟುಹೋದ ಒಬ್ಬನೇ ಒಬ್ಬ ಮಗನೂ— ನನ್ನ ಕೆಲಸಕ್ಕೆ ನೆರವಾಗುತ್ತಾನೆ ಎನ್ನುವಷ್ಟರಲ್ಲಿ ದೇವರು ಅವನನ್ನು ಒಂದು ವಾರ ಜ್ವರದಲ್ಲಿ ನರಳಿಸಿ, ಕೊಂಡೊಯ್ದನು. ಮುದಿ ಮುದಿ ಮುದುಕನಾದ ನನಗೆ ಇನ್ನೇನು ಬೇಕು? ನನ್ನ ಮಕ್ಕಳನ್ನು ಒಯ್ದ ದೇವರಿಗೆ ನನ್ನನ್ನೂ ಕೊಂಡೊಯ್ದು ಸುಖಿಸಬಾರದೇ? ನನಗೆ ಈ ಜಗತ್ತಿನಲ್ಲಿ ಇನ್ನು ಜೀವಿಸಬೇಕೆಂಬ ಇಚ್ಛೆಯಿಲ್ಲ. ಮಿತ್ರಾ! ಸತ್ಯವಾಗಿಯಾದರೆ, ನನ್ನ ಪ್ರಾಣವನ್ನು ದೇವರು ಬೇಗನೇ ಒಯ್ಯಲೆಂದೇ ನನ್ನ ಪ್ರಾರ್ಥನೆ. ಎಲ್ಲರನ್ನೂ ಅಗಲಿದ ನನಗೆ ಇನ್ನು ಈ ಲೋಕದಲ್ಲಿ ಯಾವ ಆಶೆಯೂ ಇಲ್ಲ.

ಮುದುಕ: ದೇವರ ನಿಯಮವೇ ಬೇರೆ—ಮಾರ್ಟಿನ್! ಅದನ್ನು ತಿಳಿಯಲಾರೆವು. ಎಲ್ಲವನ್ನೂ ನಿರ್ಧರಿಸುವವನು ದೇವರು. ನಮ್ಮ ಬುದ್ಧಿಯಲ್ಲ. ನಿನ್ನ ಮಗನು ಸಾಯಬೇಕೆಂದು ದೇವರು ನಿರ್ಧರಿಸಿದ್ದರೆ ಅದು ಹಾಗೆ ಆಗಲೇ ಬೇಕು. ಈಗ ನೀನು ದುಃಖಿಸುತ್ತಿರುವೆ. ಸ್ವಂತ ಸುಖಕ್ಕಾಗಿಯೇ ಬದುಕಬೇಕೆಂಬ ನಿನ್ನ ಬಯಕೆಯೇ ಈ ದುಃಖಕ್ಕೆ ಕಾರಣ.

ಮಾರ್ಟಿನ್: ಮತ್ತೆ ಯಾಕಾಗಿ ಒಬ್ಬ ಮನುಷ್ಯನು ಜೀವಿಸಬೇಕು?

ಮುದುಕ: (ನಿರ್ಧಾರವಾಗಿ) ದೇವರಿಗಾಗಿ ಮಾರ್ಟಿನ್! ನೀನು ಜೀವವನ್ನು ಪಡೆದುದು ಅವನಿಂದ! ಆದುದರಿಂದ ಅವನಿಗಾಗಿ ಬದುಕಬೇಕು! ಯಾವಾಗ ದೇವರಿಗಾಗಿ ಬದುಕಲು ಕಲಿಯುತ್ತೀಯೋ ಆಗ ನಿನ್ನ ದುಃಖಕಳೆದು ಜೀವನವು ಸುಲಭವೂ ಸಂತೋಷಕರವೂ ಆಗುವುದು.

ಮಾರ್ಟಿನ್: (ಸ್ವಲ್ಪ ಹೊತ್ತು ಮೌನವಾಗಿದ್ದು) ದೇವರಿಗಾಗಿ ಬದುಕುವುದೆಂದರೆ ಹೇಗೆ?

ಮುದುಕ: ಹೇಳುತ್ತೇನೆ, ಕೇಳು. ದೇವರಿಗಾಗಿ ಬದುಕುವುದು ಹೇಗೆಂದು ಕ್ರಿಸ್ತನೇ ನಮಗೆ ತೋರಿಸಿಕೊಟ್ಟಿದ್ದಾನೆ. ನಿನಗೆ ಓದಲು ಬರುವುದೇ?

ಮಾರ್ಟಿನ್: ಹೌದು.

ಮುದುಕ: ಹಾಗಾದರೆ ಯೇಸುಕ್ರಿಸ್ತನ ಸುವಾರ್ತೆಗಳನ್ನು ಕೊಂಡುಕೊಂಡು ಓದು. ದೇವರಿಗಾಗಿ ಬದುಕುವುದು ಹೇಗೆಂದು ತಿಳಿಯುವೆ.

ಮಾರ್ಟಿನ್: ಮಿತ್ರನೇ, ನೀನಂದಂತೆ ಮಾಡುವೆನು. (ತೆರೆ)

ದೃಶ್ಯ ೨

[ಸಮುಗಾರ ಮಾರ್ಟಿನ್ ಅವದೀಚನ ಮನೆ. ಒಂದೆಡೆ ಅವನು ಕೆಲಸಕ್ಕೆ ಕುಳಿತುಕೊಳ್ಳುವ ಜಾಗ. ಅಲ್ಲಿ ಸಮುಗಾರನಿಗೆ ಅವಶ್ಯವಿರುವ ಸಾಮಾಗ್ರಿಗಳೆಲ್ಲ ಇರಿಸಲ್ಪಟ್ಟಿವೆ. ಮತ್ತೊಂದೆಡೆ ಸ್ಟೌ, ಒಂದು ಕುರ್ಚಿ, ಒಂದು ಮೇಜು, ಒಂದು ಮಂಚು, ಮೂಲೆಯಲ್ಲಿ ಅಡಿಗೆ ಸಾಮಾನುಗಳು ಇರಿಸಲ್ಪಟ್ಟಿವೆ. ಮಾರ್ಟಿನ್ ಕುರ್ಚಿಯಲ್ಲಿ ಕುಳಿತು ಟೆಸ್ಟಮೆಂಟ್ ಓದುತ್ತಿದ್ದಾನೆ. ರಾತ್ರಿ ಸಮಯ. ಒಂದು ದೀಪ ಮೇಜಿನ ಮೇಲೆ ಉರಿಯುತ್ತಿದೆ.]

ಮಾರ್ಟಿನ್: (ಪುಸ್ತಕದಿಂದ ತಲೆಯೆತ್ತಿ) ಮುದುಕ ಮಿತ್ರನಿಂದ ನಾನು ಧನ್ಯನಾದೆನು. ಮಹಾತ್ಮಾ ಯೇಸುಕ್ರಿಸ್ತನ ಸುವಾರ್ತೆಗಳನ್ನು ಓದಲು ತೊಡಗಿದಾಗಿನಿಂದ ನನ್ನ ಚಿಂತೆಗಳೆಲ್ಲ ದೂರವಾಗಿ, ಹೃದಯವು ಹಗುರವಾಗುತ್ತಿದೆ. ರಾತ್ರಿ ಎಷ್ಟಾದರೂ ಓದುತ್ತಲೇ ಇರೋಣ ಅನ್ನಿಸುತ್ತದೆ. ಈ ಪವಿತ್ರ ಗ್ರಂಥದ ಪಾವನ ನುಡಿಗಳಿಂದ ನನ್ನ ಹೃದಯವೇ ಬದಲಾಗಿದೆ. ಈಗ ಆ ಹಿಂದಿನ ರಜಾದಿನಗಳನ್ನು ಚಹಾದ ಹೋಟೆಲುಗಳಲ್ಲಿಯೂ, ಹೆಂಡದಂಗಡಿಗಳಲ್ಲಿಯೂ ಕಳೆದು ಸಿಕ್ಕಸಿಕ್ಕವರನ್ನು ಬಯ್ಯುತ್ತ ಕಾಲವನ್ನು ಕಳೆಯುತ್ತಿದ್ದ—ಮಾರ್ಟಿನ್ ಇವನಲ್ಲ. ಈ ಮಾರ್ಟಿನನು ಸನ್ಮಾರ್ಗಿಯೂ, ದೇವರ ಕೆಲಸಗಳನ್ನು ಮಾಡುತ್ತಿರುವವನೂ ಆದ ತಿಳಿಮನಸ್ಸಿನ ಸಂತಸದ ಜೀವಿಯು. (ದೇವರ ಕಡೆ ನೋಡಿ) ಓ ಸ್ವಾಮಿಯೇ, ನೀನು ದೊಡ್ಡವನು! (ಪುನಃ ಪುಸ್ತಕವನ್ನು ಓದುತ್ತಾನೆ.)

“ನಿನ್ನ ಕೆನ್ನೆಗೆ ಯಾರಾದರೂ ಹೊಡೆದರೆ, ಇನ್ನೊಂದು ಕೆನ್ನೆಯನ್ನು ತೋರಿಸು; ನಿಲುವಂಗಿಯನ್ನು ಯಾರಾದರೂ ಕೇಳಿದರೆ ಕೋಟನ್ನು ತೆಗೆದುಕೊಡು; ಯಾರು ಏನು ಕೇಳಿದರೂ ಕೊಡು; ಕೊಟ್ಟ ವಸ್ತುಗಳನ್ನು

ಹಿಂದೆ ಕೇಳಬೇಡ; ಬೇರೆಯವರಿಂದ ನೀನು ಏನನ್ನು ಬಯಸುವಿಯೋ ಅದನ್ನೇ ಬೇರೆಯವರಿಗೂ ಮಾಡು.”

(ದೇವರನ್ನು ನೋಡಿ) ಓ ಸ್ವಾಮಿಯೇ, ನೀನು ದೊಡ್ಡವನು. ನಿನ್ನ ವಚನಗಳೋ ಮಾಣಿಕ್ಯ! (ಮುಂದೆ ಓದುವನು.)

“ನೀವು ನನ್ನನ್ನು ಸ್ವಾಮಿ ಸ್ವಾಮೀ ಎಂದು ಕರೆಯುತ್ತೀರಿ. ಮತ್ತೇಕೆ ನೀವು ನಾನಂದಂತೆ ಮಾಡುವುದಿಲ್ಲ? ಯಾವನು ನನ್ನ ಮಾತುಗಳನ್ನು ಕೇಳಿ ಅದರಂತೆಯೇ ನಡೆಯುವನೋ ಅಂತಹ ಜಾಣ ಮನುಷ್ಯನು ಆಳವಾಗಿ ಅಗೆದು ಶಿಲೆಯ ತಳಹದಿಯ ಮೇಲೆ ಕಟ್ಟಿದ ಮನೆಯು ನೆರೆಬಂದು, ಪ್ರವಾಹದ ಹೊಡೆತ ಬಿದ್ದರೂ ಅಲುಗದೆ ಇರುವಂತೆ ಇರುವನು. ಆದರೆ, ಯಾವನು ನನ್ನ ಮಾತುಗಳನ್ನು ಕೇಳಿಯೂ ಅದರಂತೆ ನಡೆಯುವುದಿಲ್ಲವೋ ಅವನು ಭದ್ರವಾದ ತಳಹದಿಯಿಲ್ಲದೇ ಮರಳಿನಲ್ಲಿ ಕಟ್ಟಿದ ಮನೆಯು ಪ್ರವಾಹದಲ್ಲಿ ಕೊಚ್ಚಲ್ಪಟ್ಟು, ಹೇಗೆ ಕುಸಿದು ನೆಲಸಮವಾಗುವುದೋ— ಅಂತಿರುವನು.”

(ನೆಮ್ಮದಿಯಿಂದ ಕನ್ನಡಕವನ್ನು ತೆಗೆದು ಪುಸ್ತಕದ ಮೇಲೆ ಇರಿಸಿ, ಓದಿದನ್ನು ಸರಿಯಾಗಿ ಅರಗಿಸುತ್ತಾ) ನನ್ನ ಮನೆಯು ಬಂಡೆಯ ಮೇಲೆ ಕಟ್ಟಲ್ಪಟ್ಟಿದೆಯೇ? ಬಂಡೆಯ ಮೇಲೆಯೇ ಕಟ್ಟಿದೆಯೆಂದಾದರೆ ಒಳ್ಳೆಯದೇ ಆಯಿತು. ಏಕಾಂತದಲ್ಲಿ ಕುಳಿತು ಆಲೋಚಿಸುವಾಗ ದೇವರ ಅನುಜ್ಞೆಯೆಲ್ಲವೂ ಸುಲಭವೆಂದೇ ತೋರುವುದು. ಮನಸ್ಸಿನ ಹಿಡಿತ ತಪ್ಪಿದಾಗ ಪಾಪಕೂಪದಲ್ಲಿ ಬಿದ್ದುದು ತಿಳಿಯುವುದೇ ಇಲ್ಲ! ಆದರೂ ನಾನು ಪ್ರಯತ್ನಿಸುತ್ತೇನೆ. ಓ ಸ್ವಾಮಿಯೇ, ನನಗೆ ನೆರವಾಗು!

(ನಿದ್ರಿಸುವುದಕ್ಕಾಗಿ ಪುಸ್ತಕವನ್ನು ಮಡಚಿ, ಮತ್ತೆ ಪುನಃ ತೆರೆದು ಓದುವನು. ಅನಂತರ ತಲೆ ಎತ್ತಿ) ಒಬ್ಬ ಧನಿಕ ಯೆಹೂದಿಯು ಯೇಸುಸ್ವಾಮಿಯನ್ನು ತನ್ನ ಮನೆಗೆ ಆಮಂತ್ರಿಸಿದನಂತೆ. ಆದರೆ, ಆತನು ಯೇಸುಸ್ವಾಮಿಗೆ ಪಾದತೊಳೆಯಲು ನೀರು ಕೊಡಲಿಲ್ಲವಂತೆ! ಆಗ ಒಬ್ಬಳು ಪಾಪಿಯಾದ ಹೆಂಗಸು ಸ್ವಾಮಿಯ ಪಾದಗಳಿಗೆ ಬಿದ್ದು, ಕಣ್ಣೀರಿನಿಂದ ಪಾದಗಳನ್ನು ತೊಳೆದಳಂತೆ!

(ಮತ್ತೆ ಪುನಃ ಓದುವನು. ಸ್ವಲ್ಪ ಸಮಯ ಮೌನದಿಂದ ಓದಿ, ಅನಂತರ ಸ್ವಲ್ಪ ಭಾಗವನ್ನು ದೊಡ್ಡದಾಗಿ ಓದುವನು)

"ಹೆಂಗಸಿನತ್ತ ತಿರುಗಿ ಸೈಮನ್ ಹೇಳಿದ: "ಈ ಹೆಂಗಸನ್ನು ನೀನು ಕಾಣುತ್ತಿರುವೆಯಷ್ಟೆ! ನಾನು ನಿನ್ನ ಮನೆಗೆ ಬಂದಾಗ, ನೀನು ನನ್ನ ಪಾದಗಳಿಗೆ ನೀರು ಕೊಡಲಿಲ್ಲ! ಆದರೆ, ಇವಳಾದರೋ ಕಣ್ಣೀರಿನಿಂದ ಪಾದ ತೊಳೆದು, ತಲೆಗೂದಲಿನಿಂದ ಒರಸಿದ್ದಾಳೆ. ನೀನು ನನಗೆ ಚುಂಬನ ಕೊಡಲಿಲ್ಲ. ಆದರೆ, ಇವಳು ನನ್ನ ಪಾದಗಳನ್ನು ಪದೇ ಪದೇ ಚುಂಬಿಸುತ್ತಿದ್ದಾಳೆ. ನೀನು ನನ್ನ ತಲೆಗೆ ಎಣ್ಣೆ ಪೂಸಲಿಲ್ಲ. ಆದರೆ, ಇವಳು ಮುಲಾಮಿನಿಂದ ನನ್ನ ಪಾದಗಳನ್ನು ಪೂಸಿದ್ದಾಳೆ."

(ಮಾರ್ಟಿನ್ ಕನ್ನಡಕವನ್ನು ತೆಗೆದು ಪುಸ್ತಕದ ಮೇಲೆ ಇರಿಸಿ, ಯೋಚಿಸುವನು.)

........ಅವನು ಯೇಸುಸ್ವಾಮಿಯ ಪಾದಗಳಿಗೆ ನೀರು ಕೊಡಲಿಲ್ಲ.... ....ತಲೆಗೆ ಎಣ್ಣೆಯನ್ನು ಪೂಸಲಿಲ್ಲ........ಆ ಯೆಹೂದಿಯೂ ನನ್ನಂತವನೇ ಇರಬೇಕು. ತನ್ನೊಬ್ಬನ ಗೊಡವೆಯಲ್ಲದೆ, ಇತರರ ಯೋಚನೆಯಿಲ್ಲ! ಮನೆಗೆ ಬಂದ ಅತಿಥಿಯನ್ನು ಆದರಿಸಿ ಮಾತಾಡಲಿಲ್ಲ; 'ಅತಿಥಿ ಹೇಗಿದ್ದರೂ ಇರಲಿ, ನಾನು ಸುಖಿಯಾಗಿರಬೇಕು' ಎಂಬ ಮನಸ್ಸಿನವನೇ ಇರಬೇಕು ಅವನು! ಬಂದ ಅತಿಥಿಯಾದರೂ ಯಾರು? ಸಾಕ್ಷಾತ್ ಯೇಸುಸ್ವಾಮಿ! ಪ್ರಿಯನಾದ ಸ್ವಾಮಿಯು ನನ್ನಲ್ಲಿಗೆ ಬಂದರೆ ನಾನು ಹಾಗೆ ಮಾಡಬೇಕೇ?

(ಮಾರ್ಟಿನ್ ಹಾಗೇ ತೋಳುಗಳ ಮೇಲೆ ತಲೆಯಿಟ್ಟು ಮಲಗುವನು. ಅಲ್ಲಿಗೇ ಜಂಪುಹತ್ತುತ್ತದೆ.)

ಅಶರೀರವಾಣಿ: ಮಾರ್ಟಿನ್!

ಮಾರ್ಟಿನ್: (ಎಚ್ಚೆತ್ತು) ಯಾರದು? (ಸುತ್ತಲೂ ನೋಡುವನು.)

ಅಶರೀರವಾಣಿ: ಮಾರ್ಟಿನ್! ಮಾರ್ಟಿನ್! ನಾಳೆ ರಸ್ತೆಯಲ್ಲಿ ನೋಡು. ಅಲ್ಲಿ ನಾನಿರುವೆನು.

ಮಾರ್ಟಿನ್: (ಕುಳಿತಲ್ಲಿಂದೆದ್ದು ಸುತ್ತಲೂ ನೋಡಿ) ಇದು ಕನಸೋ ನನಸೋ? (ಮತ್ತೆ ದೀಪ ಆರಿಸಿ ಮಂಚದಲ್ಲಿ ಕುಳಿತುಕೊಳ್ಳುವನು. ಆಗ ಪುನಃ ಎರಡು ಬಾರಿ ಮೇಲಿನ ಮಾತು ಕೇಳಿಸುವುದು.) ಓ ದೇವರೇ, ನೀನು ದೊಡ್ಡವನು. ನೀನು ದೊಡ್ಡವನು. ನಿನ್ನ ಇಚ್ಛೆ ನೆರವೇರುವುದು! (ತೆರೆ)

ದೃಶ್ಯ ೨

[ಮೊದಲಿನದೇ ದೃಶ್ಯ. ವೇಳೆ ಪೂರ್ವಾಹ್ನ. ಸ್ಟೌನಲ್ಲಿ ನೀರು ಕುದಿಯುತ್ತಿದೆ. ಮಾರ್ಟಿನ್ ತನ್ನ ಕೆಲಸದಲ್ಲಿದ್ದರೂ, ಅವನ ಕಣ್ಣುಗಳು ಮಾತ್ರ, ಕಿಟಕಿಯ ಮೂಲಕ ಹೊರಗೆ ರಸ್ತೆಯನ್ನೇ ನೋಡುತ್ತಿವೆ.]

ಮಾರ್ಟಿನ್: ನನ್ನ ಸ್ವಾಮಿಯು ನಿಜವಾಗಿಯೂ ಇಂದು ಬೀದಿಯಲ್ಲಿ ಬರುವನೇ? ಛೇ! ಇಲ್ಲ, ನಿಜವಾಗಿಯೂ ಇಲ್ಲ! ನಿನ್ನೆ ಕೇಳಿದುದೆಲ್ಲ ಬರಿಯ ಕನಸಿನಲ್ಲಿ. (ಪುನಃ ರಸ್ತೆಗೆ ನೋಡಿ) ಅದಾರೋ ಅತ್ತ ಹೋಗುತ್ತಿರುವರಲ್ಲ? (ಎದ್ದು ಇಣಿಕಿ ನೋಡಿ) ಓಹೋ! ಸರಿ. ಅವನು ಆ ಮನೆಕೆಲಸದಾಳು. (ಕೆಲಸಕ್ಕೆ ಕುಳಿತು ಸ್ವಲ್ಪ ಹೊತ್ತಿನಲ್ಲಿ ಕಿಟಿಕಿಯ ಮೂಲಕ ಬೀದಿಗೆ ನೋಡುವನು) ಇವನಾರು? ಸರಿಸರಿ; ನೀರು ಕೊಂಡುಹೋಗುವ ಆಳು. ಅವನ ಹಿಂದಿನಿಂದ ಆ ದೂರದಲ್ಲಿ ಬರುತ್ತಿರುವವರು ಯಾರು? (ಪರಿಕಿಸಿ ನೋಡಿ) ಓಹೋ, ಅವನ ಹರಕು ಪಾದರಕ್ಷೆಗಳನ್ನು ನೋಡಿದಾಗಲೇ ತಿಳಿಯುತ್ತದೆ. ನಿಕೋಲಸನ ಕಾಲದ ಮುದಿ ಸಿಪಾಯಿ ಸ್ಟೆಪಾನಿಚ್ ಎಂದು. ಈಗ ಪಾಪ, ಶರೀರದಲ್ಲಿ ಬಲವಿಲ್ಲದೆ, ವ್ಯಾಪಾರಿಯೊಬ್ಬನ ಮನೆಯಲ್ಲಿ ಮನೆಯಾಳಿಗೆ ಸಹಕರಿಸುತ್ತಾ ಜೀವಿಸುತ್ತಿರುವನು. (ಕೆಲಸದಲ್ಲಿ ತೊಡಗುವನು) ಸ್ಟೆಪಾನಿಚನು ಹಾರೆಯನ್ನು ಗೋಡೆಗೊರಗಿಸಿ ಕಿಟಕಿಯ ಬದಿಯಲ್ಲಿ ಕುಳಿತುಕೊಳ್ಳುವನು. ಮಾರ್ಟಿನ್ ಕೆಲಸಮಾಡುತ್ತಾ) ಎಂಥ ಹುಚ್ಚ ನಾನು? ಸ್ಟೆಪಾನಿಚ್ ಬರುವುದು ಹಿಮ ತೆಗೆಯಲು. ಆದರೆ, ನಾನು ತಿಳಿದುದೇನು? ಕ್ರಿಸ್ತನೇ ನನ್ನನ್ನು ಕಾಣಲು ಬರುತ್ತಿದ್ದಾನೆ ಎಂದು. ಎಂತಹ ಮುದಿ ಮರುಳ ನಾನು! (ಸ್ವಲ್ಪ ಹೊತ್ತು ಬೂಟ್ಸು ಹೊಲಿಯುತ್ತಿದ್ದು, ಅನಂತರ ಪುನಃ ಕಿಟಿಕಿಯ ಹೊರಗೆ ಚಳಿಯಲ್ಲಿ ಕುಳಿತಿದ್ದ ಸ್ಟೆಪಾನಿಚ್‌ನನ್ನು ಕನಿಕರದಿಂದ ನೋಡಿ) ಪಾಪ, ಮುದಿತನದಿಂದ ಸ್ಟೆಪಾನಿಚ್‌ನ ದೇಹವೆಲ್ಲ ಜರ್ಝರಿತವಾಗಿದೆ! ಹಿಮವನ್ನು ರಾಶಿಮಾಡುವ ಶಕ್ತಿಯೂ ಕೂಡಾ ಅವನಲ್ಲಿ ಉಳಿದಿಲ್ಲ. ಮೈ ಕಾಯಿಸಿಕೊಳ್ಳುತ್ತಿದ್ದನೋ ಏನೋ? (ಮಾರ್ಟಿನನು ಕೆಲಸವನ್ನು ಅಲ್ಲಿಯೇ ಬಿಟ್ಟು) ನಾನು ಅತನನ್ನು ಕರೆದು ಒಂದಿಷ್ಟು ಚಹಾ ಕೊಟ್ಟರಾಗದೇ? (ಚಹಾ ತಯಾರಿಸಿ, ಅನಂತರ ಕದ ತೆರೆದು) ಮಿತ್ರಾ, ಸ್ಟೆಪಾನಿಚ್! ಬಾ, ಒಳಗೆ ಬಾ! ಮೈಯನ್ನು ಸ್ವಲ್ಪ ಕಾಯಿಸಿಕೋ! ನಿನಗೆ ತುಂಬಾ ಚಳಿಯಾಗುತ್ತಿರಬೇಕು!

ಸ್ಟೆಪಾನಿಚ್: (ಪ್ರವೇಶಿಸಿ) ದೇವರು ನಿನಗೆ ಒಳ್ಳೆಯದು ಮಾಡಲಿ! ನನ್ನ ಮೈಯೆಲ್ಲ ಚಳಿಯಿಂದ ನಡುಗುತ್ತಿದೆ.

ಮಾರ್ಟಿನ್: (ಸ್ಟೆಪಾನಿಚನು ಹೊಸ್ತಿಲಲ್ಲಿ ನಿಂತು ಕಾಲು ಒರಸುತ್ತಿರುವನು. ಆಗ ಬೀಳುವಂತಾಗುವನು. ಅದನ್ನು ನೋಡಿ) ಹಾಗೆಯೇ

ಇರಲಿ. ಒರಸಿಕೊಳ್ಳದಿದ್ದರೆ ತೊಂದರೆಯಿಲ್ಲ. ನೆಲವನ್ನು ಮಾತ್ರ ನಾನು ಒರಸಿಯೇನು. ಹೇಗಾದರೂ ದಿನಕ್ಕೊಮ್ಮೆ ಒರಸುವುದಿದೆ. ನನ್ನ ನಿತ್ಯದ ಕೆಲಸದಲ್ಲಿ ಅದೂ ಒಂದಾಗಿರುತ್ತದೆ. ಬಾ ಮಿತ್ರನೇ, ಕುಳಿತುಕೋ! ಸ್ವಲ್ಪ ಚಹಾವನ್ನು ತೆಗೆದುಕೋ! (ಸ್ಟೆಪಾನಿಚ್ ಒಳಗೆ ಬಂದು ಕುಳಿತುಕೊಳ್ಳುವನು ಮಾರ್ಟಿನ್ ಎರಡು ಕಪ್‌ಗಳಲ್ಲಿ ಚಹಾ ತಂದು ಒಂದನ್ನು ಸ್ಟೆಪಾನಿಚ್‌ನಿಗೆ ಕೊಟ್ಟು. ತಾನೂ ಬಟ್ಟಲಿಗೆ ಹೊಯಿದು ತಣಿಸುವನು. ಸ್ಟೆಪಾನಿಚ್ ಒಂದೇಬಾರಿಗೆ ಕುಡಿದು ಮುಗಿಸಿ)

ಸ್ಟೆಪಾನಿಚ್: ಮಾರ್ಟಿನ್ ಅವದೀಚ್! ನಿನ್ನ ಉಪಕಾರಕ್ಕೆ ನನ್ನ ಕೃತಜ್ಞತೆಗಳು! (ಏಳುವನು).

ಮಾರ್ಟಿನ್: (ಸ್ಟೆಪಾನಿಚನನ್ನು ಕುಳ್ಳಿರಿಸಿ) ಸ್ಟೆಪಾನಿಚ್, ಇನ್ನೊಂದು ಕಪ್ ಕುಡಿ. (ಕಪ್‌ಗೆ ಚಹಾ ತುಂಬಿಸುವನು. ತಾನೂ ತುಂಬಿಸಿ ಕುಡಿಯುತ್ತಾ, ಆಗಾಗ ರಸ್ತೆಗೆ ನೋಡುತ್ತಿರುವನು).

ಸ್ಟೆಪಾನಿಚ್: ಯಾರಿಗಾದರೂ ಕಾಯುತ್ತಿರುವೆಯಾ?

ಮಾರ್ಟಿನ್: ನಾನೇ? ಹೌದು. ಆದರೆ, ಅದನ್ನು ಹೇಗೆ ಹೇಳಲೆಂದು ನನಗೇ ತಿಳಿಯುವುದಿಲ್ಲ. ನಿಜವಾಗಿಯಾದರೆ ನಾನು ಯಾರಿಗೆ ಕಾಯುತ್ತಿದ್ದೇನೆಂದು ನನಗೇ ತಿಳಿದಿಲ್ಲ. ಆದರೆ, ನಿನ್ನೆ ರಾತ್ರಿ ಕೇಳಿದ್ದನ್ನು ನನಗೆ ತಲೆಯಿಂದ ಹೊರಗೆ ಹಾಕುವುದೇ ಸಾಧ್ಯವಿಲ್ಲದಾಗಿದೆ. ಅದು ಸತ್ಯವೋ ಅಥವಾ ಬರಿಯ ಭ್ರಮೆಯೋ ನನಗೇ ತಿಳಿದಿಲ್ಲ.

ಸ್ಟೆಪಾನಿಚ್: (ಕುತೂಹಲದಿಂದ) ಅದೇನು ಅಂತಹ ವಿಚಾರ?

ಮಾರ್ಟಿನ್: ಕೇಳು, ಸ್ವಾಮಿಯಾದ ಯೇಸುಕ್ರಿಸ್ತನ ಸುವಾರ್ತೆಗಳನ್ನು ನಿನ್ನೆ ರಾತ್ರಿ ಓದುತ್ತಿದ್ದೆ. ಯೇಸು ಸ್ವಾಮಿಯು ನಮಗಾಗಿ ಹೇಗೆ ಬಿಡುವಿಲ್ಲದೆ ಕೆಲಸಮಾಡಿದ, ಅವನು ಹೇಗೆ ಕಷ್ಟದಲ್ಲಿ ನರಳಿದ, ಸಮುದ್ರದ ಮೇಲೆ ಹೇಗೆ ನಡೆದ, ಯಹೂದಿಯೊಬ್ಬನ ಮನೆಗೆ ಸ್ವಾಮಿಯು ಭೇಟಿ ಕೊಟ್ಟಾಗ ಅವನು ಸ್ವಾಮಿಯನ್ನು ಸ್ವಾಗತಿಸದೆ ಕಡೆಗಣಿಸಿದ ಭಾಗ, ಎಲ್ಲವನ್ನು ಓದುತ್ತಿದ್ದೆ. ಈ ಸಂಗತಿಗಳೆಲ್ಲ ನಿನಗೆ ತಿಳಿದಿರಬಹುದು. ಅಲ್ಲವೇ?

ಸ್ಟೆಪಾನಿಚ್: ಹೌದು, ಆದರೆ, ನಾನು ಕೇಳಿದ್ದು ಮಾತ್ರ. ನನಗೆ ಓದಲು ಬಾರದು.

ಮಾರ್ಟಿನ್: ಒಳ್ಳೆಯದು. ನಾನು ಯೇಸು ಸ್ವಾಮಿಯು ಸಮುದ್ರದ

ಮೇಲೆ ನಡೆದು ಬಂದುದನ್ನು ಓದಿದೆ. ಹಾಗೆಯೇ ಯೆಹೂದಿಯೊಬ್ಬನ ಮನೆಗೆ ಯೇಸುಸ್ವಾಮಿಯು ಹೋದುದು—ಆತನು ಸ್ವಾಮಿಯನ್ನು ಕಡೆಗಣಿಸಿದುದು,—ಈ ಭಾಗವನ್ನು ಓದಿದೆ. ಸಾಕ್ಷಾತ್ ಯೇಸುಸ್ವಾಮಿಯೇ ಮನೆಗೆ ಬಂದಾಗ ಯಾರು ಆತನನ್ನು ಆದರಿಸಿ ಸತ್ಕರಿಸಲಿಕ್ಕಿಲ್ಲ! ಆದರೆ, ಆ ಯೆಹೂದಿ ಮಾತ್ರ ಸ್ವಾಮಿಯನ್ನು ಸ್ವಾಗತಿಸಲಿಲ್ಲ. ಆದರಿಸಿ ಉಪಚರಿಸಲಿಲ್ಲ.....ಅವನು ನನ್ನಂಥವನೇ ಇರಬೇಕು—ಎಂದೆಲ್ಲ ಯೋಚಿಸುತ್ತಿದ್ದೆ! ಆಗ ನನಗೆ ಜಂಪುಹತ್ತಿತು. ಆ ಜಂಪಿನಲ್ಲಿ ಯಾರೋ ನನ್ನ ಹೆಸರು ಹಿಡಿದು ಕೂಗಿದಂತೆ ಕೇಳಿಸಿತು. ನಾನು ಎದ್ದು ನೋಡಿದೆ! ಯಾರೂ ಇರಲಿಲ್ಲ. "ಮಾರ್ಟಿನ್! ಮಾರ್ಟಿನ್! ನಾಳೆ ರಸ್ತೆಯ ಮೇಲೆ ನೋಡು, ನಾನು ಬರುತ್ತೇನೆ" ಎಂಬೊಂದು ಅಶರೀರವಾಣಿ ಕೇಳಿಸಿತು. ಹೀಗೆ ಮೂರು ಬಾರಿ ಆಯಿತು. ಈ ಮಾತು ನನ್ನ ಮನಸ್ಸಿನಲ್ಲಿ ಬೇರೂರಿ ಹೋಗಿದೆ. ಸ್ಟೆಪಾನಿಚ್! ನನಗೆ ಈ ವಿಚಾರವನ್ನು ಹೇಳಲು ನಾಚಿಕೆ ಎನಿಸುತ್ತದೆ. ಮಿತ್ರ ಸ್ಟೆಪಾನಿಚ್, ಸತ್ಯವಾಗಿಯಾದರೆ, ನನ್ನ ಪ್ರೀತಿಯ ಯೇಸುಸ್ವಾಮಿಯು ಇಂದು ಬರುವನೆಂಬ ಆಸೆ ಇನ್ನೂ ಇದೆ.

ಸ್ಟೆಪಾನಿಚ್: (ಮೌನದಲ್ಲಿ ತಲೆ ಆಡಿಸಿ ಚಹಾವನ್ನು ಕುಡಿದು ಕಪ್ ಕೆಳಗಿರಿಸುವನು.)

ಮಾರ್ಟಿನ್: (ಪುನಃ ಎರಡೂ ಕಪ್‌ಗಳಿಗೆ ಚಹಾ ತುಂಬಿಸಿ) ಸ್ಟೆಪಾನಿಚ್! ಇನ್ನೊಂದು ಕಪ್ ಕುಡಿ....ನೋಡು, ಯೇಸುಸ್ವಾಮಿಯು ಜನಸಾಮಾನ್ಯರೊಂದಿಗೆ, ಗರೀಬರೊಂದಿಗೆ, ನಮ್ಮಂತಹ ಸಾಮಾನ್ಯ ಕೆಲಸಗಾರರೊಂದಿಗೆ ಪ್ರೀತಿಯಿಂದ ಬೆರೆತುಕೊಂಡನು. ಅದಲ್ಲದೆ, ತನ್ನ ಶಿಷ್ಯರನ್ನೂ ಅವರಿಂದಲೇ ಆರಿಸಿಕೊಂಡನು. ಜನಸಾಮಾನ್ಯರ, ಗರೀಬರ, ಕಷ್ಟದಲ್ಲಿ ನರಳುವವರ, ಅನಾಥರ ಸೇವೆಯನ್ನು ಪ್ರೀತಿಯಿಂದಲೂ ಭಕ್ತಿಯಿಂದಲೂ ಶ್ರದ್ಧೆಯಿಂದಲೂ ಮಾಡಿದರೆ ಅದುವೇ ದೇವರ ಸೇವೆ. ಯಾಕೆಂದರೆ, ಸ್ವಾಮಿಯು ಬಡವರನ್ನೂ ಕಷ್ಟಜೀವಿಗಳನ್ನೂ ಅನಾಥರನ್ನೂ ದಯಾಮಯರನ್ನೂ ಕರುಣೆಯಿಂದ ಆಶೀರ್ವದಿಸಲಿಲ್ಲವೇ?

(ಸ್ಟೆಪಾನಿಚ್ ಚಹಾ ಮರೆತು ಕೇಳುವನು. ಕಣ್ಣಲ್ಲಿ ನೀರು ಉಕ್ಕಿ ಬರುವುದು. ಅನಂತರ ಚಹಾ ಕುಡಿದು ಏಳುವನು).

ಮಾರ್ಟಿನ್: ಮಿತ್ರ ಸ್ಟೆಪಾನಿಚ್! ಇನ್ನೊಂದು ಕಪ್ ಕುಡಿ.

ಸ್ಪೆಪಾನಿಚ್: ಇಲ್ಲ, ಇನ್ನು ಕುಡಿಯುಲಾರೆ. ಮಾರ್ಟಿನ್ ಅವದೀಚ್, ನಿನಗೆ ವಂದನೆಗಳು. ನೀನು ನನ್ನ ದೇಹ-ಆತ್ಮಗಳಿಗೆ ಎರಡಕ್ಕೂ ಅನ್ನ—ಶಾಂತಿಯನ್ನಿತ್ತೆ.

ಮಾರ್ಟಿನ್: ನಿನಗೆ ಯಾವಾಗಲೂ ಸ್ವಾಗತವಿದ್ದೇ ಇದೆ. ಸ್ಪೆಪಾನಿಚ್, ಇನ್ನೊಮ್ಮೆ ಬಾ!

ಸ್ಪೆಪಾನಿಚ್: ತುಂಬಾ ವಂದನೆಗಳು.

(ಸ್ಪೆಪಾನಿಚ್ ಹೊರಟುಹೋಗುವನು. ಮಾರ್ಟಿನ್ ಎಲ್ಲ ಸಾಮಗ್ರಿಗಳನ್ನು ಸ್ವಸ್ಥಾನದಲ್ಲಿರಿಸಿ ಬೂಟ್ಸು ಹೊಲಿಯಲು ಕುಳಿತುಕೊಳ್ಳುವನು. ಅವನ ಕಣ್ಣುಗಳು ಮಾತ್ರ ರಸ್ತೆಯ ಮೇಲೆ ಯಾರನ್ನೋ ಅರಸುತ್ತಿರುತ್ತವೆ).

ಮಾರ್ಟಿನ್: ಯಾರು ಹೋದರೂ ಯೇಸುಕ್ರಿಸ್ತನೇ ಬಂದನೆಂದು ಭ್ರಮೆಯಾಗುತ್ತಿದೆ....ಅದಾರು?....ಸರಿ ಸರಿ, ಅವನು ....ಸಿಪಾಯಿ.... ಸಿಪಾಯಿಯ ಹಿಂದೆ ಹೊಸ ಬೂಟ್ಸುಗಳನ್ನು ಧರಿಸಿ ಬರುತ್ತಿರುವವನು ನೆರೆಮನೆಯ ಯಜಮಾನ; ಅವನ ಹಿಂದಿನಿಂದ ಬರುತ್ತಿರುವವನು ರೊಟ್ಟಿ ಮಾರುವ ಹುಡುಗ! (ಮತ್ತೂ ನೋಡಿ) ಅದಾರು? ಹರಕು ಬಟ್ಟೆ, ಹರಿದ ಬೂಟ್ಸುಗಳನ್ನು ಧರಿಸಿ ಹೆಂಗಸೊಬ್ಬಳು ಈ ಕಡೆಗೇ ಬರುತ್ತಿರುವಳು. ಇವಳನ್ನು ನಾನು ಇದುವರೆಗೆ ನೋಡಿದ್ದೇ ಇಲ್ಲ. ಕೈಯಲ್ಲಿ ಒಂದು ಮಗುವೂ ಇದೆ; ಚಳಿಯನ್ನು ಸಹಿಸಲಾರದೆ ಅದು ಅಳುತ್ತಿದೆ. ಪಾಪ! ಮಗುವನ್ನು ರಕ್ಷಿಸಲಾರದೆ, ಕಷ್ಟಪಡುತ್ತಿದ್ದಾಳೆ. (ಬಾಗಿಲ ಬಳಿ ಹೋಗಿ) ಅವ್ವಾ! ಮಗುವನ್ನು ಹಿಡಿದುಕೊಂಡು ಅಲ್ಲಿ ಚಳಿಯಲ್ಲಿ ಏಕೆ ನಿಂತಿರುವೆ? ಇಲ್ಲಿ ಬೆಚ್ಚಗಿದೆ. ಈ ದಾರಿಯಾಗಿ ಬಾ! (ಹೆಂಗಸು ಆಶ್ಚರ್ಯಪಟ್ಟು ಒಳಗೆ ಬರುವಳು. ಮಾರ್ಟಿನನು ಒಲೆಯ ಬಳಿ ಬೆಂಚಿನಲ್ಲಿ ಹಾಸಿಗೆ ಬಿಡಿಸಿ)

ಮಾರ್ಟಿನ್: ಇಲ್ಲಿ ಬೆಚ್ಚಗಿದೆ. ಇಲ್ಲಿ ಕುಳಿತುಕೋ. ಮೈ ಕಾಯಿಸಿ ಮಗುವಿಗೆ ಮೊಲೆಯುಣಿಸು.

ಹೆಂಗಸು: ಮೊಲೆಯುಣಿಸಲು ಮೊಲೆಯಲ್ಲಿ ಹಾಲು ಬೇಕಷ್ಟೆ! ಇಂದು ಬೆಳಗ್ಗಿನಿಂದ ನಾನು ಏನನ್ನೂ ತಿಂದಿಲ್ಲ (ಎಂದು ಮಗುವಿಗೆ ಮೊಲೆಯೊಡ್ಡುವಳು. ಮಗು ಅಳುತ್ತಿದೆ. ಮಾರ್ಟಿನ್ ಒಂದು ತುಂಡು ಬ್ರೆಡ್ ಮತ್ತು ಸಾರು ತಂದು ಮೇಜಿನಲ್ಲಿಟ್ಟು)

ಮಾರ್ಟಿನ್: ನೀನಿಲ್ಲಿ ಕುಳಿತು ತಿನ್ನವ್ವಾ! ನಾನು ಮಗುವನ್ನು ನೋಡಿಕೊಳ್ಳುವೆನು. ನನಗೂ ಮಕ್ಕಳಿದ್ದರು. ಮಕ್ಕಳನ್ನಾಡಿಸಲು ನನಗೂ

ತಿಳಿದಿದೆ. (ಮಗುವನ್ನು ಎತ್ತಿಕೊಂಡು, ಮುದ್ದಾಡುತ್ತಾ, ಹಾಸಿಗೆಯಲ್ಲಿ ಮಲಗಿಸಿ ನಗಿಸಲು ಯತ್ನಿಸುವನು. ಮಗು ಅಳು ನಿಲ್ಲಿಸಿ ನಗಲು ಪ್ರಾರಂಭಿಸುತ್ತದೆ. ಹೆಂಗಸು ಆಹಾರ ಸೇವಿಸುತ್ತಾ)

ಹೆಂಗಸು: ನಾನು ಒಬ್ಬ ಬಡ ಸಿಪಾಯಿಯ ಹೆಂಡತಿ. ಆದರೆ, ಈಗ ಎಂಟು ತಿಂಗಳಿಂದ ಅವರ ಸುದ್ದಿಯೇ ಇಲ್ಲ. ಈ ಮಗು ಜನಿಸುವ ತನಕ ನಾನು ಒಂದು ಕಡೆ ಅಡುಗೆ ಕೆಲಸ ಮಾಡುತ್ತಿದ್ದೆ. ಮತ್ತೆ ಮಗುವನ್ನೂ ನನ್ನನ್ನೂ ಇರಿಸಿಕೊಳ್ಳಲು ಅವರು ಒಪ್ಪಲಿಲ್ಲ. ಈಗ ಮೂರು ತಿಂಗಳಿಂದ ಕೆಲಸ ಸಿಕ್ಕದೆ ಅಲೆಯುತ್ತಿದ್ದೇನೆ. ಇದ್ದುದನ್ನೆಲ್ಲ ಅನ್ನಕ್ಕಾಗಿ ಮಾರಿಯಾಯಿತು! ಈಗತಾನೆ ಒಬ್ಬ ವ್ಯಾಪಾರಿಯ ಹೆಂಡತಿಯು ನನ್ನನ್ನು ಕೆಲಸಕ್ಕೆ ತೆಗೆದುಕೊಳ್ಳಲು ಒಪ್ಪಿರುವಳು. ಆದರೆ, ಈ ಒಂದು ವಾರ ಕಳೆಯಬೇಕಂತೆ. ಆ ಸ್ಥಳವು ಇನ್ನೂ ತುಂಬಾ ದೂರ ಇದೆ. ನಡೆದು ನಡೆದು ಸಾಕಾಯಿತು. ಮಗುವಂತೂ ಕಂಗಾಲಾಗಿದೆ. ಯೇಸುಸ್ವಾಮಿಯ ದಯದಿಂದ ನನ್ನ ಧನಿ ಬಹಳ ಒಳ್ಳೆಯವಳು. ಅವಳು ಗುಡಿಸಲಲ್ಲಿ ಉಚಿತವಾಗಿ ಉಳಿದುಕೊಳ್ಳಲು ಬಿಟ್ಟಿದ್ದಾಳೆ.

ಮಾರ್ಟಿನ್: (ನಿಟ್ಟುಸಿರಿಟ್ಟು) ನಿನ್ನಲ್ಲಿ ಬೆಚ್ಚಗಿನ ಬಟ್ಟೆಗಳಿಲ್ಲವೇ?

ಹೆಂಗಸು: ಬೆಚ್ಚಗಿನ ಬಟ್ಟೆಯೇ? ಎಲ್ಲಿಂದ ಬರಬೇಕು? ನನ್ನಲ್ಲಿದ್ದ ಒಂದೇ ಒಂದು ಶಾಲನ್ನು ಆರು ಪೆನ್ನಿಗಳಿಗೆ ಅಡವಿಟ್ಟೆ. (ಎದ್ದು ಮಗುವನ್ನು ಎತ್ತಿಕೊಳ್ಳುವಳು. ಮಾರ್ಟಿನ್ ಆಗ ಒಂದು ನಿಲುವಂಗಿಯನ್ನು ತಂದು)

ಮಾರ್ಟಿನ್: ತೆಗೆದುಕೋ. ಇದು ಹರಿದುಹೋಗಿದ್ದರೂ ಮಗುವಿಗೆ ಹೊದೆಸಲು ಸಾಕು!

ಹೆಂಗಸು ಮಾರ್ಟಿನನನ್ನೂ ಒಮ್ಮೆ ನಿಲುವಂಗಿಯನ್ನೂ ನೋಡಿ, ಬಾಷ್ಪಲೋಚನಳಾಗುವಳು. ಮಾರ್ಟಿನ್ ಪುನಃ ಹಾಸಿಗೆಯಲ್ಲಿದ್ದ ಒಂದು ಸಣ್ಣ ಪೆಟ್ಟಿಗೆಯಲ್ಲಿ ಏನನ್ನೋ ಹುಡುಕಿ, ಮತ್ತೆ ಬಂದು ಹೆಂಗಸಿನ ಮುಂದೆ ಕುಳಿತುಕೊಳ್ಳುವನು)

ಹೆಂಗಸು: ದೇವರು ನಿನಗೆ ಒಳ್ಳೆಯದನ್ನು ಮಾಡಲಿ! ಸ್ವಾಮಿಯಾದ ಯೇಸುವೇ ನನ್ನನ್ನು ನಿನ್ನಲ್ಲಿಗೆ ಕಳುಹಿಸಿರಬೇಕು. ಈ ದರಿದ್ರಳ ಮೇಲೂ ಪುಟ್ಟ ಮಗುವಿನ ಮೇಲೂ ಕರುಣೆ ತೋರುವಂತೆ ಮಾಡಿದವನು ಅವನೇ ಸರಿ. ಇಲ್ಲದಿದ್ದರೆ ಈ ನನ್ನ ಮಗು ಚಳಿಗೆ ಬಲಿಯಾಗುತ್ತಿತ್ತು!

ಮಾರ್ಟಿನ್: ಅದು ನಿಜ. ನಿಮ್ಮಲ್ಲಿ ಕರುಣೆತೋರುವಂತೆ ಮಾಡಿದವನು ಕ್ರಿಸ್ತನೇ ಹೌದು. ಅದರಲ್ಲಿ ಸಂದೇಹವೇ ಇಲ್ಲ ನೋಡು, ನಿನ್ನೆ ರಾತ್ರಿ ನಾನು ಯೇಸುಸ್ವಾಮಿಯ ಸುವಾರ್ತೆಯನ್ನು ಓದುತ್ತಿದ್ದೆ. ಸಮುದ್ರದ ಮೇಲೆ ನಡೆದುದು, ಯಹೂದಿಯೊಬ್ಬನ ಮನೆಗೆ ಸ್ವಾಮಿಯು ಹೋದುದು, ಆತನು ಸ್ವಾಮಿಯನ್ನು ಕಡೆಗಣಿಸಿದುದು.... ಈ ಭಾಗವನ್ನೆಲ್ಲ ಓದುತ್ತಿದ್ದೆ. ಸಾಕ್ಷಾತ್ ಸ್ವಾಮಿಯೇ ಮನೆಗೆ ಬಂದರೂ ಆ ಯಹೂದಿಯು ಆತನನ್ನು ಸತ್ಕರಿಸಲಿಲ್ಲವಲ್ಲ ಎಂದು ಯೋಚಿಸುತ್ತಿದ್ದೆ. ಆಗ ನನಗೆ ಜಂಪುಹತ್ತಿತು. ಆ ಜಂಪಿನಲ್ಲಿ ಯಾರೋ ನನ್ನ ಹೆಸರು ಹಿಡಿದು ಕೂಗಿದಂತಾಯಿತು. ಎದ್ದು ನೋಡಿದೆ. ಯಾರೂ ಇರಲಿಲ್ಲ. ದೀಪ ಆರಿಸಿ ಮಲಗಿದೆ. ಆಗ "ಮಾರ್ಟಿನ್! ಮಾರ್ಟಿನ್! ನಾಳೆ ರಸ್ತೆಯ ಮೇಲೆ ನೋಡು, ನಾನು ಬರುತ್ತೇನೆ" ಎಂದು ಮೂರು ಬಾರಿ ಕೇಳಿಸಿತು. ಅದು ನನ್ನ ಮನಸ್ಸಿನಲ್ಲಿ ಬೇರೂರಿ ಹೋಗಿದೆ. ನಿಜವಾಗಿಯೂ ಯೇಸುಸ್ವಾಮಿಯು ಬರುವನೆಂದೇ ಕಾದುಕುಳಿತಿದ್ದೇನೆ.

ಹೆಂಗಸು: ದೇವರು ಬಲ್ಲ! ಎಲ್ಲಾ ಸಾಧ್ಯವಿದೆ. (ಎಂದು ನಿಲುವಂಗಿಯನ್ನು ತನಗೂ ಮಗುವಿಗೂ ಸುತ್ತಿಕೊಂಡು) ನಾನಿನ್ನು ಬರುವೆ. ನಿನ್ನ ಉಪಕಾರಕ್ಕೆ ಕೃತಜ್ಞತೆಗಳು.

ಮಾರ್ಟಿನ್: (ಆರು ಪೆನ್ನಿಗಳನ್ನು ಕೊಟ್ಟು) ಇದನ್ನು ತೆಗೆದುಕೋ. ನೀನು ಒತ್ತೆ ಇಟ್ಟ ಶಾಲನ್ನು ಬಿಡಿಸಿಕೋ!

ಹೆಂಗಸು: (ದೇವರಿಗೆ ಕೈಮುಗಿದು) ದೇವರೇ, ನೀನು ದೊಡ್ಡವನು. (ಎಂದು ಹೊರಟುಹೋಗುವಳು. ಮಾರ್ಟಿನ್ ಸ್ವಲ್ಪ ಸಾರು ಕುಡಿದು ಕೆಲಸಕ್ಕೆ ಕುಳಿತುಕೊಳ್ಳುವನು. ಆಗಾಗ ಕಿಟಕಿಯ ಮೂಲಕ ಹೊರಗೆ ನೋಡುತ್ತಿರುವನು. ಸ್ವಲ್ಪ ಹೊತ್ತಿನ ಅನಂತರ ಸೇಬುಮಾರುವ ಮುದುಕಿ ಮಾರ್ಟಿನನ ಮನೆಯ ಕಿಟಕಿಯ ಬದಿಯಲ್ಲಿ ರಸ್ತೆಯಲ್ಲಿ ಬುಟ್ಟಿಯನ್ನು ಇಳಿಸಿ, ಗೋಣಿಯಲ್ಲಿ ತುಂಬಿದ ಮರದ ಚೆಕ್ಕೆಗಳನ್ನು ಕುಲುಕಿ ಕಟ್ಟುವಳು. ಆಗ ಒಬ್ಬ ಹುಡುಗ ಹಣ್ಣೊಂದನ್ನು ಎತ್ತಿಕೊಂಡು, ಓಡಲು ನೋಡುವನು. ಮುದುಕಿ ಅವನನ್ನು ಹಿಡಿದು ಕೈ ಅದುಮಿ, ಹರಕು ಟೊಪ್ಪಿಯನ್ನು ಎತ್ತಿ ಬೀದಿಗೆ ಎಸೆದು, ತಲೆಗೂದಲಲ್ಲಿ ಹಿಡಿದು)

ಮುದುಕಿ: ಥೂ ಕಳ್ಳ! ನಿನಗೆ ಕಲಿಸುತ್ತೇನೆ ಬುದ್ಧಿ! ಸ್ಟೇಷನಿಗೆ

ಒಯಿದು ಕೊರಡೆ ಏಟು ಹಾಕಿಸುತ್ತೇನೆ! (ಹುಡುಗ ಅಳುವನು. ಮಾರ್ಟಿನ್ ಕೆಲಸ ಅಲ್ಲೇ ಬಿಟ್ಟು, ಎದ್ದು ಹೊರಗೆ ಓಡಿಬರುವನು. ಅವನ ಕನ್ನಡಕ ಬಿದ್ದರೂ ಅವನಿಗೆ ತಿಳಿಯಲಿಲ್ಲ. ಓಡಿಬಂದು ಹುಡುಗನನ್ನು ಬಿಡಿಸುವನು).

ಹುಡುಗ: ಬೇಡ ಅಜ್ಜಿ. ನಾನು ಕದಿಯಲಿಲ್ಲ. ನನ್ನನ್ನೇಕೆ ಹೊಡೆಯುತ್ತೀ? ನನ್ನನ್ನು ಬಿಡು. ನಾನು ಹೋಗುತ್ತೇನೆ.

ಮಾರ್ಟಿನ್: ಅವನು ಹೋಗಲಿ ಅಜ್ಜಿ. ಚಿಕ್ಕ ಹುಡುಗ. ಕ್ಷಮಿಸಿ ಬಿಡು. ಯೇಸುಸ್ವಾಮಿಯು ನಿನಗೊಳ್ಳೆಯದನ್ನು ಮಾಡುವನು.

ಮುದುಕಿ: ಅಂತಹ ಕಳ್ಳನನ್ನು ಬಿಡುವುದೇ? ಕಲಿಸುತ್ತೇನೆ ಬುದ್ಧಿ! ಪೋಲೀಸರ ಕೈಯಿಂದ ಕೊರಡೆ ಏಟು ಕೊಡಿಸಿಯೇ ಬಿಡುತ್ತೇನೆ.

ಮಾರ್ಟಿನ್: ಬೇಡ ಅಜ್ಜಿ, ಚಿಕ್ಕ ಹುಡುಗ— ತಿಳಿಯದೇ ತಪ್ಪು ಮಾಡಿದ. ಬಿಟ್ಟುಬಿಡು. ಇನ್ನೊಮ್ಮೆ ಹಾಗೆ ಮಾಡನು....ಬಿಡು, ಹೋಗಲಿ....ಯೇಸುಸ್ವಾಮಿಯನ್ನು ನೆನಸಿಯಾದರೂ ಬಿಟ್ಟುಬಿಡು. (ಮುದುಕಿ ಬಿಡುವಳು. ಹುಡುಗನು ಓಡುವಾಗ ಮಾರ್ಟಿನ್ ತಡೆದು)

ಮಾರ್ಟಿನ್: ಓಡಬೇಡ ಮಗೂ....ಅಜ್ಜಿಯ ಕ್ಷಮೆಯನ್ನು ಕೇಳು. ಇನ್ನು ಕದಿಯಬೇಡ. ನೀನು ಹಣ್ಣನ್ನು ತೆಗೆದುದನ್ನು ನಾನೂ ನೋಡಿರುವೆ.

ಹುಡುಗ: (ಅಳುತ್ತಾ) ಅಜ್ಜೀ, ನನ್ನ ತಪ್ಪನ್ನು ಕ್ಷಮಿಸು. ಇನ್ನೊಮ್ಮೆ ಹಾಗೆ ಮಾಡುವುದಿಲ್ಲ.

ಮಾರ್ಟಿನ್: ಹಾಗೆ (ಬುಕ್ಕೆಯಿಂದ ಹಣ್ಣೊಂದನ್ನು ತೆಗೆದು) ಇಕೋ, ನಿನಗೊಂದು ಹಣ್ಣು. ಅಜ್ಜೀ, ಅದರ ಹಣ ನಾನು ಕೊಡುತ್ತೇನೆ.

ಮುದುಕಿ: ಹೀಗೆ ಮಾಡಿಯೇ ಹುಡುಗರು ತಪ್ಪುದಾರಿ ಹಿಡಿಯೋದು. ಅವನಿಗೆ ಎಂದೆಂದಿಗೂ ಮರೆಯದ ಹಾಗೆ ಚೆನ್ನಾಗಿ ಥಳಿಸಿಬಿಡಬೇಕಿತ್ತು.

ಮಾರ್ಟಿನ್: ಅಯ್ಯೋ ಅಜ್ಜೀ....ನಮ್ಮ ದಾರಿ ಹಾಗೆ! ಆದರೆ, ಅದು ದೇವರ ದಾರಿಯಲ್ಲ! ಒಂದು ಹಣ್ಣನ್ನು ತೆಗೆದುದಕ್ಕೇ ಅವನಿಗೆ ಚಾಟಿಯಿಂದ ಹೊಡೆಯಬೇಕೆಂದರೆ— ನಮ್ಮ ಪಾಪಗಳಿಗೆ ಏನು ಮಾಡಬೇಕು?

ಮುದುಕಿ: (ಬೆರಗಾಗಿ ನೋಡುತ್ತಿರುವಳು)........

ಮಾರ್ಟಿನ್: ಯೇಸುಕ್ರಿಸ್ತನು ತನ್ನ ಸೇವಕನ ಸಾಲವನ್ನು ಕ್ಷಮಿಸಿದ. ಆ ಸೇವಕನು ಮಾತ್ರ ತನ್ನ ಸಾಲದವನ ಕೊರಳು ಹಿಡಿದುದನ್ನು ನೀನು ಕೇಳಿಲ್ಲವೇ? ಅದು ನ್ಯಾಯವೇ? ನಾವು ಕ್ಷಮಿಸಬೇಕೆಂಬುದು

ದೇವರ ಇಚ್ಛೆ. ಇಲ್ಲವಾದರೆ ನಮ್ಮನ್ನು ಯಾರೂ ಕ್ಷಮಿಸಲಾರರು. ಎಲ್ಲರನ್ನೂ, ಆದರಲ್ಲೂ ಬುದ್ಧಿಯಿಲ್ಲದ ಈ ಚಿಕ್ಕ ಹುಡುಗನನ್ನು, ಕ್ಷಮಿಸು.

ಮುದುಕಿ (ತಲೆ ಅಲ್ಲಾಡಿಸಿ) ಅದು ಸತ್ಯ. ಆದರೆ, ಈ ಹುಡುಗನು ಕೈತಪ್ಪಿ ಹಾಳಾಗುತ್ತಿದ್ದಾನೆ.

ಮಾರ್ಟಿನ್: ನಾವು ಹಿರಿಯರು, ಸರಿದಾರಿ ತೋರಬೇಕು.

ಮುದುಕಿ: ನಾನು ಹೇಳುತ್ತಿರುವುದೂ ಅದನ್ನೇ! ನನಗೆ ಏಳು ಮಂದಿ ಮಕ್ಕಳಿದ್ದರು. ಅವರಲ್ಲಿ ಈಗ ಒಬ್ಬಳು ಮಗಳು ಮಾತ್ರ ಉಳಿದಿದ್ದಾಳೆ. ಅವಳ ಮಕ್ಕಳು, ಅಂದರೆ ನನ್ನ ಮೊಮ್ಮಕ್ಕಳು ಬಹಳ ಒಳ್ಳೆಯ ಮಕ್ಕಳು. ನನ್ನಲ್ಲಿ ಶಕ್ತಿ ಇಲ್ಲದಿದ್ದರೂ ಆ ಮೊಮ್ಮಕ್ಕಳಿಗಾಗಿ ದುಡಿಯುತ್ತಿದ್ದೇನೆ. ನಾನು ಮನೆ ಹೊಕ್ಕರೆ ಸಾಕು, ಎಲ್ಲಾ ಮಕ್ಕಳು ಬಂದು ನನ್ನನ್ನು ಮುತ್ತಿಬಿಡುತ್ತವೆ. ಈ ಹುಡು/ನದ್ದೇನು, ಹುಡುಗಾಟಿಕೆ—ಅಷ್ಟೆ. ಯೇಸುಸ್ವಾಮಿ ಅವನಿಗೆ ಸುಬುದ್ಧಿ ! ಡಲಿ. (ಮುದುಕಿ ಗೋಣಿಯನ್ನೆತ್ತಿ ಹೆಗಲಮೇಲಿರಿಸಿ ಹೊರಡುವಾಗ ಹುಡುಗ ಓಡಿಬಂದು)

ಹುಡುಗ: ಅಜ್ಜೀ ಅಜ್ಜೀ! ಗೋಣಿಯನ್ನು ನಾನು ಹೊತ್ತುಕೊಳ್ಳುತ್ತೇನೆ. ನಾನೂ ಇದೇ ದಾರಿಯಿಂದಲೇ ಹೋಗುವುದು. (ಮುದುಕಿ ತಲೆ ಆಡಿಸಿ, ಹುಡುಗನ ಹೆಗಲಿನಲ್ಲಿ ಗೋಣಿ ಇರಿಸಿ, ಹಣ್ಣಿನ ಬುಟ್ಟಿಯನ್ನು ತಾನು ಹೊತ್ತುಕೊಳ್ಳುವಳು. ಇಬ್ಬರೂ ಒಟ್ಟಿಗೇ ಹೋಗುತ್ತಿರುವುದನ್ನು ಮಾರ್ಟಿನ್ ನೋಡುತ್ತಿದ್ದು, ಅನಂತರ ಮನೆಯೊಳಗೆ ಬಂದು, ಬಿದ್ದ ಕನ್ನಡಕ ಎತ್ತಿಕೊಳ್ಳುವನು. ಆಗತಾನೆ ಕತ್ತಲಾಗಿದೆ.)

ಮಾರ್ಟಿನ್: ಓಹೋ, ದೀಪ ಉರಿಸುವ ಹೊತ್ತಾಯಿತು. (ದೀಪ ಉರಿಸಿ) ಅರ್ಧ ಹೊಲಿದಿಟ್ಟ ಬೂಟ್ಸಿನ ಕೆಲಸ ಪೂರೈಸಿಬಿಡುತ್ತೇನೆ. (ಕೆಲಸಕ್ಕೆ ತೊಡಗುವನು. ಸ್ವಲ್ಪ ಹೊತ್ತಿನಲ್ಲೇ ಬೂಟ್ಸಿನ ಕೆಲಸ ಮುಗಿಸಿ ಸಾಮಾನುಗಳನ್ನು ಒಂದೆಡೆ ಇರಿಸಿ, ದೀಪವನ್ನು ಮೇಜಿನಲ್ಲಿರಿಸಿ, ಪವಿತ್ರ ಗ್ರಂಥವನ್ನು ಎತ್ತಿಕೊಳ್ಳುವನು.)

ಮಾರ್ಟಿನ್: ಹೌದು, ನಿನ್ನೆ ಇದೇ ಪವಿತ್ರ ಗ್ರಂಥ ಓದುತ್ತಿದ್ದಾಗ ಜಂಪು ಹತ್ತಿತು. ಜಂಪಿನಲ್ಲಿ ಯಾರೋ ಕರೆದಂತಾಯಿತು. (ಯಾರೋ

(ಹೊದಿಕೆಯ 2ನೇ ಪುಟಕ್ಕೆ ಮುಂದುವರಿದಿದೆ)

Edited, Printed & Published by K. V. Shenoy
at The Prabhat Printers Ltd., Mangalore.